**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ.111/2021**

**ಪಿಡಬ್ಲ್ಯೂ 12**

**ಸಿಡಬ್ಲ್ಯೂ 13**

| | |
|---|---|
| ಸಾಕ್ಷಿದಾರರ ಹೆಸರು | ಯೀಗೇಶ |
| ತಂದೆಯ ಹೆಸರು | ಜವರಯ್ಯ |
| ವಯಸ್ಸು | 37 ವರ್ಷ |
| ಕೆಲಸ | ಪೋಲಿಸ್ ಪೇದೆ, ಬೆಟ್ಟದಪುರ ಪೋಲಿಸ್ ಠಾಣೆ |
| ವಾಸ | ಲಕ್ಷ್ಮೀಪುರ |

**ದಿನಾಂಕ 01.04.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

2013 ರಿಂದ 2019 ರವರೆಗೆ ಕೆ ಆರ್ ನಗರ ಪೊಲೀಸ್ ಠಾಣೆಯಲ್ಲಿ ಪೋಲಿಸ್ ಪೇದೆಯಾಗಿ ಕಾರ್ಯನಿರ್ವಹಿಸಿರುತ್ತೇನೆ.

ದಿಃ 02.06.2019 ರಂದು ನಾನು, ಚಾಸಾ 15 ಮತ್ತು 16 ರವರನ್ನು ರಾತ್ರಿ ಗಸ್ತಿಗಾಗಿ ಹೈವೆ ಪೆಟ್ರೋಲ್ ವಾಹನಕ್ಕೆ ನೇಮಿಸಿದ್ದರು. ಆಗ ನಾವು 3 ಜನ ಕೆ.ಆರ್.ನಗರ ಟೌನ್ ನಲ್ಲಿ ರಾತ್ರಿ ಗಸ್ತನ್ನು ಮಾಡುತ್ತಿದ್ದು, ರಾತ್ರಿ ಸಮಯ 11.10 ನಿಮಿಷಕ್ಕೆ ಕೆ.ಆರ್.ನಗರ ಪೋಲಿಸ್ ಠಾಣೆ ವೈರಲೈಸ್ ನಿಂದ ಸಿಟಿ ಲೈಟ್ ಹೊಟೆಲ್ ಬಳಿ ಗಲಾಟೆ ನಡೆಯುತ್ತಿದೆ ಅಲ್ಲಿಗೆ ಹೋಗಿ ಎಂದು ಮಾಹಿತಿ ಬಂತು. ನಾವು ಸದರಿ ಸ್ಥಳಕ್ಕೆ ಹೋಗಿ ನೋಡಲಾಗಿ ನಮ್ಮ ಠಾಣೆಯ ಚಾಸಾ 12 ಮತ್ತು 14 ರವರು ಇದ್ದರು. ಆ ಸಮಯದಲ್ಲಿ ಆರೋಪಿತರು ಚಾಸಾ 1 ರವರ ಮೇಲೆ ಗಲಾಟೆ ಮಾಡುತ್ತಿದ್ದು ಅವರನ್ನು ಚಾಸಾ 12 ಮತ್ತು 14 ರವರು ಸಮಾಧಾನಪಡಿಸುತ್ತಿದ್ದು ಆ ಸಮಯದಲ್ಲಿ 2 ನೇ ಆರೋಪಿ ಸ್ಥಳದಿಂದ ಓಡಿ ಹೋದರು. ಅದನ್ನು ನಾನು ನೋಡಿದೆ. ಸ್ಥಳದಲ್ಲಿದ್ದ 1 ನೇ ಆರೋಪಿಯನ್ನು ನಾವು ಕರೆದುಕೊಂಡು ಕೆ.ಆರ್.ನಗರ ಪೋಲಿಸ್ ಠಾಣೆಗೆ ಬಂದಿರುತ್ತೇವೆ. ಘಟನೆಯ ಬಗ್ಗೆ ಮಾಹಿತಿ ಕೇಳಲಾಗಿ ಸ್ಥಳದಲ್ಲಿದ್ದ ಚಾಸಾ 1 ರವರು ಹಾಗೂ ಅಲ್ಲಿದ್ದಂತಹ ಪ್ರತ್ಯಕ್ಷ ಸಾಕ್ಷಿಗಳಾದ ಚೇತನ, ಮಂಜು ಮತ್ತು ವಿನೋದ ಹಾಗೂ ಇತರರ

ಮುಂದೆ ಏನಾಯಿತು ಎಂಬ ವಿಚಾರವನ್ನು ಕೇಳಲಾಗಿ ಚಾಸಾ 1 ರವರು ರಾತ್ರಿ ಗಸ್ತು ಕರ್ತವ್ಯದಲ್ಲಿ ಸಿಟಿಲೈಟ್ ಹೋಟೆಲ್ ಹತ್ತಿರ ಗಸ್ತು ಮಾಡುತ್ತಿದ್ದಾಗ ಇನ್ನೂ ಹೊಟೆಲ್ ನ್ನು ನಡೆಸುತ್ತಿದ್ದು ಈಗಾಗಲೇ ಸಮಯವಾಗಿದೆ ಹೋಟೆಲ್ ನ್ನು ನಡೆಸಬಾರದು ಮುಚ್ಚಿ ಎಂದು ಹೇಳಲಾಗಿ, ಹೋಟೆಲ್ ನ ಒಳಗಡೆ ಊಟ ಮಾಡುತ್ತಿದ್ದ ಆರೋಪಿತರು ಹೊಟೆಲ್ ನಿಂದ ಹೊರಗಡೆ ಬಂದು ನಮ್ಮ ದುಡ್ಡು, ನಮ್ಮ ಇಷ್ಟ ನಾವು ಎಷ್ಟು ಹೊತ್ತಾದರು ಊಟ ಮಾಡುತ್ತೇವೆ ನಾವು ಲೋಕಲ್ ಹುಡುಗರು ಅದನ್ನು ಕೇಳಲು ನೀನು ಯಾರು ಎಂದು ಬೋಳಿ ಮಗನೇ, ಸೂಳೇ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಸಮವಸ್ತ್ರದಲ್ಲಿದ್ದ ಮಹೇಂದ್ರರವರಿಗೆ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿ ಬಲಗೈಗೆ ಕೈಗಳಿಂದ ಹೊಡೆದು ಬಲಗೈನ ರಿಸ್ಟ ಗೆ ಹೊಡೆದು ಸಮವಸ್ತ್ರವನ್ನು ಹಿಡಿದು ಕರ್ತವ್ಯಕ್ಕೆ ಅಡ್ಡಿಪಡಿಸಿ 2 ನೇ ಆರೋಪಿಯು ಚಾಸಾ 1 ರವರನ್ನು ತಳ್ಳಿ ಬೀಳಿಸಲಾಗಿ ಅದರಿಂದ ಚಾಸಾ 1 ರವರ ಬಲಗಾಲಿಗೆ ಪೆಟ್ಟಾಗಿರುತ್ತದೆ ಎಂದು ನನಗೆ ತಿಳಿಸಿರುತ್ತಾರೆ. ಈ ಎಲ್ಲ ವಿಚಾರವನ್ನು ತನಿಖಾಧಿಕಾರಿಗೆ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಶ್ರೀ ಹೆಚ್.ಕೆ.ಸಿ ಆರೋಪಿತರ ಪರ ವಕೀಲರಿಂದಃ**

ಕೆ.ಆರ್.ನಗರ ಟೌನ್ ಗೆ ಸಂಬಂದಪಟ್ಟಂತೆ ಒಟ್ಟು 4 ಬೀಟ್ ಗಳಿವೆ. ಆ ದಿನ ನನ್ನನ್ನು ಹೈವೆ ಪೆಟ್ರೋಲ್ ವಾಹನಕ್ಕೆ ನೇಮಿಸಿದ್ದರು. ನನಗೆ ವೈರಲೈಸ್ ಮೂಲಕ ಮಾಹಿತಿ ಬಂದಾಗ ಹೈವೆ ಪೆಟ್ರೋಲ್ ವಾಹನ ಬಸವೇಶ್ವರ ಬ್ಲಾಕ್ ನಲ್ಲಿರುವ ಮಹದೇಶ್ವರ ಸ್ವಾಮಿ ದೇವಸ್ಥಾನದ ಬಳಿ ಇತ್ತು. ಹೈವೆ ಪೆಟ್ರೋಲ್ ವಾಹನವು ಗಸ್ತು ಸಮಯದಲ್ಲಿ ಇಂತಹ ಸಮಯದಲ್ಲಿ ಇಂತಹ ಸ್ಥಳದಲ್ಲೇ ಇರಬೇಕು ಎಂಬ ಸೂಚನೆ ನಮಗೆ ಇರುತ್ತದೆ ಎಂದರೆ ಸರಿಯಲ್ಲ. ಘಟನೆ ನಮಗೆ ಮಾಹಿತಿ ಬಂದಾಗ ಸಮಯ ರಾತ್ರಿ 11.10 ಆಗಿತ್ತು. ಹೋಟೆಲ್ ಬಳಿ ಹೋದಾಗ ಸಮಯ 11.12 ಆಗಿತ್ತು.

3. ನಾವು ಸ್ಥಳಕ್ಕೆ ಬರುವಷ್ಟರಲ್ಲಿ ಚಾಸಾ 12 ಮತ್ತು 14 ರವರು ಅಲ್ಲೇ ಇದ್ದರು. ಗಲಾಟೆಯನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಗಲಾಟೆಯಾಗಿದೆ ಎಂದು ಹೇಳುವ ಸ್ಥಳದಲ್ಲಿ ನಾನು ಹೋದ ಸಂದರ್ಭದಲ್ಲಿ ಚಾಸಾ 9 ರಿಂದ 11 ಮತ್ತು ನಮ್ಮ ಪೋಲಿಸ್ ಸಿಬ್ಬಂದಿಗಳು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ ಎಂದರೆ ಸಾಕ್ಷಿ ಆರೋಪಿತರು ಸ್ಥಳದಲ್ಲಿದ್ದರು ಎಂದು ನುಡಿಯುತ್ತಾರೆ. 1 ನೇ ಆರೋಪಿಯನ್ನು ನಾವು ನಮ್ಮ ವಾಹನದಲ್ಲಿ ಕರೆದುಕೊಂಡು ಹೋಗಿರುತ್ತೇವೆ. ಘಟನೆ ನಡೆದ ಕೂಡಲೇ 1 ನೇ ಆರೋಪಿಯನ್ನು ಠಾಣೆಗೆ ಕರೆದುಕೊಂಡು ಬಂದೆವು. ಚಾಸಾ 1 ಬೈಕಿನಲ್ಲಿ ಠಾಣೆಗೆ ಬಂದರು.

4. ಗಲಾಟೆ ಆಗಿದೆ ಎಂದು ಹೇಳಲು ಆಗಿರುವ 2 ದಿನಗಳ ಹಿಂದೆ ಟೌನ್ ಮುನ್ಸಿಪಾಲಿಟಿ ಚುನಾವಣೆಯ ತೀರ್ಪು ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ದಿನ ನಾನು ಮೇಲೆ ಹೇಳಿದ ಸಮಯಕ್ಕೆ ಗಲಾಟೆಯಾಗಿದೆ ಎಂದು ಹೇಳಲಾಗಿರುವ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ 1 ರವರ ಮೇಲೆ ಹಲ್ಲೆ ಮಾಡಿದ್ದಾರೆ, ಅವಾಚ್ಯ ಶಬ್ದಗಳಿಂದ ಬೈದಿದ್ದಾರೆ ಹಾಗೂ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ ಎಂದು ನನಗೆ ಮಾಹಿತಿ ನೀಡಿದ್ದು ಆ ರೀತಿ ಯಾವುದೇ ಹಲ್ಲೆ ಆರೋಪಿತರು ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರಿಗೆ ಆರೋಪಿತರ ವಿರುದ್ಧ ವೈಯಕ್ತಿಕ ದ್ವೇಷದ ಮೇರೆಗೆ ಸುಳ್ಳು ದೂರನ್ನು ನೀಡಿದ್ದು ಅದಕ್ಕೆ ನಾನು ಅವರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u> - ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್ )
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ.111/2021**

**ಪಿಡಬ್ಲೂ 11**

**ಸಿಡಬ್ಲೂ 11**

| | |
|---|---|
| ಸಾಕ್ಷಿದಾರರ ಹೆಸರು | ಅರುಣ |
| ತಂದೆಯ ಹೆಸರು | ಕೃಷ್ಣಮೂರ್ತಿ |
| ವಯಸ್ಸು | 36 ವರ್ಷ |
| ಕೆಲಸ | ಪೋಲಿಸ್ ಪೇದೆ, ಹುಣಸೂರು ಟೌನ್ ಪೋಲಿಸ್ ಠಾಣೆ |
| ವಾಸ | ಹುಣಸೂರು |

**ದಿನಾಂಕ 01.04.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

2016 ರಿಂದ 2022 ರವರೆಗೆ ಕೆ ಆರ್ ನಗರ ಪೊಲೀಸ್ ಠಾಣೆಯಲ್ಲಿ ಪೋಲಿಸ್ ಪೇದೆಯಾಗಿ ಕಾರ್ಯನಿರ್ವಹಿಸಿರುತ್ತೇನೆ.

ದಿಃ 02.06.2019 ರಂದು ರಾತ್ರಿ 9 ಗಂಟೆಗೆ ರಾತ್ರಿ ಗಸ್ತು ಕರ್ತವ್ಯಕ್ಕೆ ಕೆ.ಆರ್.ನಗರ ಠಾಣೆಗೆ ಬಂದು ಚಾಸಾ 20 ರವರಿಗೆ ವರದಿ ಮಾಡಿರುತ್ತೇನೆ. ನಂತರ ಅವರು ನನಗೆ ಹಾಗೂ ಚಾಸಾ 1 ರವರಿಗೆ ಸಿಆರ್ 200/2019 ರ ಪ್ರಕರಣದಲ್ಲಿ ಆರೋಪಿಯಾದ ರಘುರವರನ್ನು ನ್ಯಾಯಾಧೀಶರ ಮುಂದೆ ಹಾಜರುಮಾಡಿ ಎಂದು ತಿಳಿಸಲಾಗಿ ಅವರನ್ನು ನಾವು ಹಾಜರುಪಡಿಸಿ ಜೈಲಿಗೆ ಬಿಟ್ಟು ಬಂದಿರುತ್ತೇವೆ. ನಂತರ ಠಾಣೆಗೆ ಬಂದಿರುತ್ತೇವೆ. ಚಾಸಾ 20 ರವರ ಆದೇಶದಂತೆ ರಾತ್ರಿ ಗಸ್ತು ಕರ್ತವ್ಯಕ್ಕೆ ಚಾಸಾ 1 ರವರೊಂದಿಗೆ ಚಾಸಾ 2 ರವರನ್ನು ನೇಮಿಸಿ ನನ್ನೊಂದಿಗೆ ಚಾಸಾ 14 ರವರನ್ನು ನೇಮಿಸಿ ರಾತ್ರಿ ಗಸ್ತು ಕರ್ತವ್ಯಕ್ಕೆ ಕಳುಹಿಸಿರುತ್ತಾರೆ. ನಾವು ರಾತ್ರಿ ಗಸ್ತು ಮಾಡುತ್ತಿದ್ದಾಗ 11.10 ನಿಮಿಷದಲ್ಲಿ ವೈರ್ ಲೆಸ್ ನಲ್ಲಿ ಕೆ.ಆರ್.ನಗರ ಟೌನ್ ನ ಸಿಟಿ ಲೈಟ್ ಹತ್ತಿರ ಗಲಾಟೆ ನಡೆಯುತ್ತಿದೆ ಎಂದು ತಿಳಿಸಿಲಾಗಿ ತಕ್ಷಣ ನಾವು ಅಲ್ಲಿಗೆ ಬರಲಾಗಿ ಅಷ್ಟರಲ್ಲಿ ಅಲ್ಲಿ ಆಗಲೇ ಚಾಸಾ 13 ಹಾಗೂ 15 ಅವರೊಂದಿಗೆ ಚಾಸಾ 16 ರವರು ಹಾಜರಿದ್ದು ಅಲ್ಲಿದ್ದ ಆರೋಪಿತರನ್ನು ಜಗಳವಾಡದಂತೆ ಸಮಾಧಾನಪಡಿಸುತ್ತಿದ್ದು

ಅಲ್ಲಿದ್ದ 2 ನೇ ಆರೋಪಿಯು ಓಡಿ ಹೋಗಿರುತ್ತಾನೆ. ಅದನ್ನು ಲೈಟ್ ಬೆಳಕಿನಲ್ಲಿ ನೋಡಿರುತ್ತೇನೆ. ನಂತರ 1 ನೇ ಆರೋಪಿಯನ್ನು ಎಲ್ಲರೂ ಠಾಣೆಗೆ ಕರೆದುಕೊಂಡು ಹೋಗಿರುತ್ತೇವೆ. ನಂತರ ಚಾಸಾ 1 ರವರು ಹಾಗೂ ಅಲ್ಲಿದ್ದಂತಹ ಪ್ರತ್ಯಕ್ಷ ಸಾಕ್ಷಿಗಳಾದ ಚೇತನ, ಮಂಜು ಮತ್ತು ವಿನೋದ ಹಾಗೂ ಇತರರ ಮುಂದೆ ಏನಾಯಿತು ಎಂಬ ವಿಚಾರವನ್ನು ಕೇಳಲಾಗಿ ಚಾಸಾ 1 ರವರು ರಾತ್ರಿ ಗಸ್ತು ಕರ್ತವ್ಯದಲ್ಲಿ ಸಿಟಿಲೈಟ್ ಹೋಟೆಲ್ ಹತ್ತಿರ ಗಸ್ತು ಮಾಡುತ್ತಿದ್ದಾಗ ಇನ್ನೂ ಹೊಟೆಲ್ ನ್ನು ನಡೆಸುತ್ತಿದ್ದು ಈಗಾಗಲೇ ಸಮಯವಾಗಿದೆ ಹೋಟೆಲ್ ನ್ನು ನಡೆಸಬಾರದು ಮುಚ್ಚಿ ಎಂದು ಹೇಳಲಾಗಿ, ಹೋಟೆಲ್ ನ ಒಳಗಡೆ ಊಟ ಮಾಡುತ್ತಿದ್ದ ಆರೋಪಿತರು ಹೊಟೆಲ್ ನಿಂದ ಹೊರಗಡೆ ಬಂದು ನಮ್ಮ ದುಡ್ಡು, ನಮ್ಮ ಇಷ್ಟ ನಾವು ಎಷ್ಟು ಹೊತ್ತಾದರು ಊಟ ಮಾಡುತ್ತೇವೆ ನಾವು ಲೋಕಲ್ ಹುಡುಗರು ಅದನ್ನು ಕೇಳಲು ನೀನು ಯಾರು ಎಂದು ಬೋಳಿ ಮಗನೇ, ಸೂಳೇ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಸಮವಸ್ತ್ರದಲ್ಲಿದ್ದ ಮಹೇಂದ್ರರವರಿಗೆ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿ ಬಲಗೈಗೆ ಕೈಗಳಿಂದ ಹೊಡೆದು ಬಲಗೈನ ರಿಸ್ಟ ಗೆ ಹೊಡೆದು ಸಮವಸ್ತ್ರವನ್ನು ಹಿಡಿದು ಕರ್ತವ್ಯಕ್ಕೆ ಅಡ್ಡಿಪಡಿಸಿ 2 ನೇ ಆರೋಪಿಯು ಚಾಸಾ 1 ರವರನ್ನು ತಳ್ಳಿ ಬೀಳಿಸಲಾಗಿ ಅದರಿಂದ ಚಾಸಾ 1 ರವರ ಬಲಗಾಲಿಗೆ ಪೆಟ್ಟಾಗಿರುತ್ತದೆ ಎಂದು ನನಗೆ ತಿಳಿಸಿರುತ್ತಾರೆ. ನಂತರ ನಾನು ಚಾಸಾ 1 ರವರನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಾಸಾ 1 ರವರಿಗೆ ಚಿಕಿತ್ಸೆ ಕೊಡಿಸಿರುತ್ತೇನೆ. ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಶ್ರೀ ಹೆಚ್.ಕೆ.ಸಿ ಆರೋಪಿತರ ಪರ ವಕೀಲರಿಂದಃ**

ನಮಗೆ ಠಾಣೆಯಿಂದ ವೈರಲೈಸ್ ಮುಖಾಂತರ ಮಾಹಿತಿ ಬಂತು. ಕೆ.ಆರ್.ನಗರ ಟೌನ್ ಗೆ ಸಂಬಂದಪಟ್ಟಂತೆ ಒಟ್ಟು 4 ಬೀಟ್ ಗಳಿವೆ. ಆ ದಿನ ನನ್ನನ್ನು ಬೀಟ್ ಸಂಖ್ಯೆ 3 ಮತ್ತು 4 ಕ್ಕೆ ಗಸ್ತು ಮಾಡಲು ನೇಮಿಸಿದ್ದರು. 3 ನೇ ಬೀಟ್ ಮುಸ್ಲಿಂ ಬ್ಲಾಕ್ ನಿಂದ ಸಂಪೂರ್ಣವಾಗಿ ಪಿ.ವಿ ರಸ್ತೆಯಿಂದ ಹಾಸನ ಮೈಸೂರು ರಸ್ತೆ ಎಡಭಾಗಕ್ಕೆ ಬರುತ್ತದೆ. 4 ನೇ ಬೀಟ್ ಗರುಡಗಂಭ ಸರ್ಕಲ್ ನಿಂದ ಹುಣಸೂರುಗೆ ಹೋಗುವ ರಸ್ತೆಯ ಎಡಭಾಗ ಬರುತ್ತದೆ.

2. ಚಾಸಾ 1 ರವರು 2 ನೇ ಬೀಟ್ ನಲ್ಲಿದ್ದರು. 2 ನೇ ಬೀಟ್ ಹಾಸನ ಮೈಸೂರು ರಸ್ತೆಯ ಬಲಭಾಗಕ್ಕೆ ಬರುತ್ತದೆ. 2 ನೇ ಬೀಟ್ ಕಡೆ ಶಿಕ್ಷಕರ ಭವನ, ಉರ್ದು ಶಾಲೆ ಇದೆ ಎಂದರೆ ಸರಿ. ಮಾಹಿತಿ ಬಂದ ಸಮಯದಲ್ಲಿ ನಾನು ಖಾಸಗಿ ವಾಹನದಲ್ಲಿದ್ದು ವಾಕಿಟಾಕಿ ನಲ್ಲಿದ್ದೆ. ನಾನು 3 ಮತ್ತು 4 ನೇ ಬೀಟಿಗೆ ನೇಮಕಗೊಂಡಿದ್ದೇನೆ ಎಂದು ನನ್ನನ್ನು

ನೇಮಿಸಿದವರು ಠಾಣೆಯ ಪುಸ್ತಕದಲ್ಲಿ ನಮೂದಿಸಿರುತ್ತಾರೆ. ನನಗೆ ವೈರಲೈಸ್ ಮೂಲಕ ಮಾಹಿತಿ ಬಂದಾಗ ನಾನು ಹುಣಸೂರು ರಸ್ತೆಯ ಸಬ್ ಜೈಲ್ ಮುಂಭಾಗ ಇದ್ದೆ. ಆಗ ಸಮಯ ರಾತ್ರಿ 11.05 ಆಗಿತ್ತು. ಆ ಸಮಯದಲ್ಲಿ ಹೊಟೆಲ್ ಬಳಿ ಗಲಾಟೆ ಆಗುತ್ತಿದೆ ಎಂಬ ಮಾಹಿತಿ ಬಂತು. ಹೋಟೆಲ್ ಬಳಿ ಹೋದಾಗ ಸಮಯ 11.15 ಆಗಿತ್ತು.

3. ಗಲಾಟೆಯನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆರೋಪಿತರು ಸ್ಥಳದಲ್ಲಿದ್ದು ಅವರನ್ನು ಸಮಾಧಾನಪಡಿಸುತ್ತಿದ್ದನ್ನು ಹಾಗೂ 2 ನೇ ಆರೋಪಿಯು ಸ್ಥಳದಿಂದ ಓಡಿ ಹೋಗಿದ್ದನ್ನು ನೋಡಿದ್ದೇನೆ ಎಂದು ನುಡಿಯುತ್ತಾರೆ. ನಾನು ಸ್ಥಳಕ್ಕೆ ಹೋದ ನಂತರ 2 ನೇ ಆರೋಪಿ ಸ್ಥಳದಿಂದ ಓಡಿ ಹೋದದ್ದನ್ನು ನೋಡಿದ್ದೇನೆ. 2 ನೇ ಆರೋಪಿ ಓಡಿ ಹೋಗುವ ಮುನ್ನ ನಾನು ಹಾಗೂ ಚಾಸಾ 16 ಸ್ಥಳದಲ್ಲಿದ್ದೇವು ಎಂದರೆ ಸರಿ. ಮಂಜು ಮತ್ತು ಚೇತನ ರವರನ್ನು ಹೊರತುಪಡಿಸಿ ಸ್ಥಳದಲ್ಲಿ ಬೇರೆ ಯಾರು ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯನ್ನು ಸ್ಥಳದಲ್ಲಿದ್ದ ನಾವೆಲ್ಲರೂ ಬನ್ನಿ ಎಂದು ಪೋಲಿಸ್ ಠಾಣೆಗೆ ಕರೆದುಕೊಂಡು ಹೋದೆವು. ನಂತರ ನಾನು ಠಾಣೆಯಲ್ಲಿ 20 ನಿಮಿಷಗಳ ಕಾಲ ಇದ್ದೆ. ನಾನು ಚಾಸಾ 1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಮಧ್ಯರಾತ್ರಿ 2 ಗಂಟೆ ಆಗಿತ್ತು. ಅಂದರೆ 03.06.2019 ಆಗಿತ್ತು ಎಂದರೆ ಸರಿ.

4. ಗಲಾಟೆ ಆಗಿದೆ ಎಂದು ಹೇಳಲು ಆಗಿರುವ 2 ದಿನಗಳ ಹಿಂದೆ ಟೌನ್ ಮುನ್ಸಿಪಾಲಿಟಿ ಚುನಾವಣೆಯ ತೀರ್ಪು ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ದಿನ ನಾನು ಮೇಲೆ ಹೇಳಿದ ಸಮಯಕ್ಕೆ ಗಲಾಟೆಯಾಗಿದೆ ಎಂದು ಹೇಳಲಾಗಿರುವ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ 1 ರವರ ಮೇಲೆ ಹಲ್ಲೆ ಮಾಡಿದ್ದಾರೆ, ಅವಾಚ್ಯ ಶಬ್ದಗಳಿಂದ ಬೈದಿದ್ದಾರೆ ಹಾಗೂ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ ಎಂದು ನನಗೆ ಮಾಹಿತಿ ನೀಡಿದ್ದು ಆ ರೀತಿ ಯಾವುದೇ ಹಲ್ಲೆ ಆರೋಪಿತರು ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರಿಗೆ ಆರೋಪಿತರ ವಿರುದ್ದ ವೈಯಕ್ತಿಕ ದ್ವೇಷದ ಮೇರೆಗೆ ಸುಳ್ಳು ದೂರನ್ನು ನೀಡಿದ್ದು ಅದಕ್ಕೆ ನಾನು ಅವರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u> ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್ )

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ